ಮೇಲೆ ಕೈಯಿಟ್ಟು ಏನೋ ಹೇಳುವವಳಿದ್ದಳು, ಆಗ ನನಗೆ ಅವಳ ಕೈಯನ್ನು ಕತ್ತರಿಸಿ ಅದನ್ನು ಪಂಜರದೊಳಗಿಟ್ಟು, ಅದನ್ನು ಮುಚ್ಚಬೇಕೆಂದು ಮನಸ್ಸಾಯಿತು. ಆದರೆ, ಕೈಟಿ ಕೂಡಲೇ ಕೈಯನ್ನು ತೆಗೆದು ಹೇಳಿದಳು, "ನೀನು ಭಾರತೀಯನಾಗಿದ್ದರೆ, ಗಿಳಿಯ ಬಗ್ಗೆ ತಿಳಿದಿರಲೇಬೇಕು".

"ಕೈಟಿ, ಭಾರತೀಯನಾಗುವುದಕ್ಕೂ ಮತ್ತು ಗಿಳಿಯ ಬಗೆಗಿನ ತಿಳಿವಳಿಕೆಗೂ ಏನು ಸಂಬಂಧ?"

"ಹಾಗಾದರೆ, ಭಾರತದ ಪುರಾಣಗಳ ಬಗ್ಗೆ ನಿನಗೇನೂ ಗೊತ್ತಿಲ್ಲವೇ?"

ಮತ್ತೊಮ್ಮೆ ನನ್ನ ಸಿಟ್ಟು ನೆತ್ತಿಗೇರಿತ್ತು, ಆದರೆ ನಾನು ಮೌನವಾಗಿದ್ದೆ. ಅವಳು ಮತ್ತೆ ಹೇಳಿದಳು:

"ವೇದಗಳ ಕಾಲದಿಂದಲೇ ಗಿಳಿಗಳು ಕಾಮದೇವನೊಂದಿಗೆ ಸಂಬಂಧವನ್ನು ಹೊಂದಿವೆ. ಕಾಮದೇವನ ಪತ್ನಿ ರತಿ. ಕಾಮದೇವ ಗಿಳಿಯ ಮೇಲೆ ಕೂತು ಕಬ್ಬಿನ ಧನುಸ್ಸು, ಜೇನಿನ ಗೂಡಿನಿಂದಾದ ಹೆದೆ ಮತ್ತು ಪುಷ್ಪಬಾಣಗಳನ್ನು ಹಿಡಿದು ದೇವರ ರೂಪವನ್ನು ಧರಿಸುತ್ತಾನೆಂದು ಹೇಳುತ್ತಾರೆ. ನನಗೀಗ ಎಲ್ಲ ಪುರಾಣಗಳು ನೆನಪಾಗುತ್ತಿಲ್ಲ, ಕಾಮದೇವ ಸಮಾಧಿ ಸ್ಥಿತಿಯಲ್ಲಿ ಕೂತ ಶಿವನಿಗೆ ಹೂ ಬಾಣಗಳನ್ನು ಬಿಟ್ಟು ಅವನ ಸಮಾಧಿಯನ್ನು ಭಗ್ನಗೊಳಿಸಿದ್ದ. ಶಿವ ರೇಗಿ ಕಾಮದೇವನ್ನೇ ಭಸ್ಮಗೊಳಿಸಿದ್ದ."

"ಸರಿ! ನಿನಗೆ ಭಾರತದ ಮೈಥಾಲಜಿಯ ಬಗ್ಗೆ ಇಷ್ಟೊಂದು ಜ್ಞಾನ ಎಲ್ಲಿಂದ ದೊರೆಯಿತು?" ನಾನು ಕೇಳಿದೆ.

"ಕಾಲೇಜು ದಿನಗಳಲ್ಲಿ ನಾನು ಭಾರತೀಯ ಪುರಾಣಗಳ ಬಗ್ಗೆ ಒಂದು ಕ್ಲಾಸ್ ಮಾಡಿದ್ದೆ, ನಾವು ಕಾಮದೇವನ ಬಗ್ಗೆ ಮಾತನಾಡುತ್ತಿದ್ದೆವು. ಅದೊಂದು ದಿನ ಪಾರ್ವತಿ ನಿರಾಶಳಾಗಿದ್ದಳು. ಶಿವ ಹೇಳಿದ, "ಪಾರ್ವತಿ, ನಾನು ನಿನಗೇನು ಸಹಾಯ ಮಾಡಬಲ್ಲೆ?" ಪಾರ್ವತಿ ಹೇಳಿದಳು, "ನೀವು ಮತ್ತೆ ಕಾಮದೇವನನ್ನು ಜೀವಂತಗೊಳಿಸಿ." ಶಿವ ಹೇಳಿದ, "ನಾನು ಅವನಿಗೆ ಶಾರೀರಿಕ ರೂಪವನ್ನು ಕೊಡಲಾರೆ, ಆದರೆ ಅವನ ಆತ್ಮವನ್ನು ಜೀವಂತಗೊಳಿಸುತ್ತೇನೆ. ಈ ಕಾರಣದಿಂದ ಕಾಮದೇವ ತನ್ನ ಎಂದಿನ ರೂಪದಲ್ಲಿ ದರ್ಶನ ಕೊಡುವುದಿಲ್ಲ, ಆದರೆ ಅವನು ದೇವರ ರೂಪದಲ್ಲಿ, ಮಾನವೀಯ ಇಚ್ಛೆಗಳು ಮತ್ತು ಸಹವಾಸದ ದೇವರೆಂದು ತಿಳಿಯಲ್ಪಡುತ್ತಾನೆ. ಸಹವಾಸದ ಜಾಗದಲ್ಲಿ ಅವನನ್ನು ಪ್ರೀತಿಯ ದೇವರೆಂದೂ ಹೇಳಬಹುದು. ಪುಷ್ಪಗಳ ಗುಪ್ತ ಬಾಣಗಳನ್ನು ಬಿಟ್ಟು ಅವನು ಮಾನವೀಯ ಕಾಮನೆಗಳನ್ನು ಹೆಚ್ಚಿಸಬಲ್ಲ. ಪ್ರೀತಿಸುವ ಅಗಲಿದ ಜೋಡಿಗಳನ್ನು ಕೂಡಿಸಬಲ್ಲ."

"ಅದು ರೋಚಕ ಪುರಾಣ, ಆ ಬಗ್ಗೆ ನೀನೇನು ತಾನೇ ನನಗೆ ಹೇಳಬಲ್ಲೆ?"

"ಈಗ ನಾನು ಔಷಧಿ ತೆಗೆದುಕೊಳ್ಳುವ ಸಮಯವಾಗಿದೆ. ಅಲ್ಲದೆ, ನಾನು ದಣಿದಿದ್ದೇನೆ. ನಾವು ಮುಂದಿನ ವಿಷಯಗಳನ್ನು ಇನ್ನೊಂದು ದಿನ ಮಾತನಾಡೋಣ." ಹೀಗೆಂದು ಅವಳು ಒಳಗೆ ಹೋದಳು. ನಾನು ಅಲ್ಲಿಂದ ಮರಳಿ ಬರುವಾಗ ಖಾಲಿ ಪಂಜರದ ಚಿತ್ರವನ್ನು ತೆಗೆದುಕೊಂಡು ಬಂದಿದ್ದೆ. ಆದರೆ, ಏಕೋ ಏನೋ, ಒಂದು ದಿನ ನಾನು ಕೆಲಸದಿಂದ ಮರಳಿ ಬಂದಾಗ ನನ್ನ ಗ್ಯಾರೇಜಿನ ಬಾಗಿಲ ಬಳಿ ಎರಡು ಅಡಿ ಎತ್ತರದ ಗೊಂಬೆಯೊಂದು ಬಿದ್ದಿತ್ತು. ಅದರ ರವಿಕೆ ಮತ್ತು ಭುಜಗಳು ನಗ್ನವಾಗಿದ್ದವು. ನಾನು ಕಾರಿನಿಂದ ಇಳಿದೆ, ಗೊಂಬೆಯನ್ನು ಎತ್ತಿಕೊಂಡೆ, ಅದನ್ನು ಗ್ಯಾರೇಜಿನ ಒಂದು ಮೂಲೆಯಲ್ಲಿ ನಿಲ್ಲಿಸಿದೆ. ಆದರೆ, ನಾನು ಅನೇಕ ದಿನಗಳವರೆಗೆ, ಗೊಂಬೆಯನ್ನು ಅಲ್ಲಿ ಯಾರು ಮತ್ತು ಏಕೆ ಇಟ್ಟಿದ್ದಾರೆ ಎಂದು ಯೋಚಿಸಿದೆ. ನಾನು ಕೈಲಿಯನ್ನು ವಿಮಾನ ನಿಲ್ದಾಣದಲ್ಲಿ ಭೇಟಿಯಾಗಲು ಹೋದಾಗ, ಒಂದು ಗಳಿಗೆ ವ್ಯತ್ಯಾಸವಾದರೆ, ಜಗತ್ತು ಬದಲಾಗದು ಎಂದು ತೀವ್ರವಾಗಿ ಮನಗಾಣುತ್ತಿದ್ದೆ. ನನ್ನ ಜೀವನ ರೂಪುಗೊಳ್ಳುತ್ತಿತ್ತು. ಅವಳು ಬರುವ ದಿನಾಂಕವನ್ನು ಗಮನದಲ್ಲಿಟ್ಟುಕೊಂಡು ನಾನು ಈ ಮೊದಲೇ ಒಂದು ವಾರದ ರಜವನ್ನು ತೆಗೆದುಕೊಂಡಿದ್ದೆ.

ಮೊದಲ ಎರಡು ದಿನಗಳು ಕೈಲಿಯ ನಿದ್ದೆಗೆ ಮೀಸಲಾಗಿದ್ದವು. ಭಾರತದ ಸಮಯದಲ್ಲಿನ ಅವಳ